**ಸಾಕ್ಷಿಯನ್ನು ದಿನಾಂಕಃ 02.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಎಸ್.ಎಂ.ಎಂ. ವಕೀಲರಿಂದಃ**

ನನಗೆ ಒಬ್ಬನೇ ಮಗನಿರುತ್ತಾನೆ. ನಾನು ಹೊಸಮಾಳ ಗ್ರಾಮದ ವಾಸಿಯಾಗಿರುತ್ತೇನೆ. ನನ್ನ ತಂದೆಯ ಹೆಸರು ಗೋಪಯ್ಯ ಎಂಬುದಾಗಿದ್ದು ಮತ್ತು ನನ್ನ ತಾಯಿಯ ಹೆಸರು ಮಣಿಯಮ್ಮ ಎಂಬುದಾಗಿರುತ್ತದೆ. ನಾನು ಹೊಸಮಾಳ ಗ್ರಾಮದದಲ್ಲಿ ನನ್ನ ಗಂಡನ ಜೊತೆ ವಾಸ ಮಾಡಿಕೊಂಡಿರುತ್ತೇನೆ. ನಾನು ಈ ದಾವೆಯನ್ನು ನನಗೆ ದಾವಾ ಆಸ್ತಿಯಲ್ಲಿ ಭಾಗಾಂಶ ಕೊಟ್ಟಿರುವುದಿಲ್ಲವೆಂದು ಹೂಡಿರುತ್ತೇನೆ. ನಾನು ಪ್ರತಿವಾದಿಗಳಾದ ಮಲ್ಲಯ್ಯ ಹಾಗು ಶಿವಲಿಂಗಯ್ಯರವರ ವಿರುದ್ದ ಈ ದಾವೆ ಹೂಡಿರುತ್ತೇನೆ. ಪ್ರತಿವಾದಿಗಳ ತಾಯಿಯ ಹೆಸರು ಮುದ್ದಮ್ಮ ಎಂಬುದಾಗಿರುತ್ತದೆ. ಸದರಿ ಮುದ್ದಮ್ಮರವರ ಮೊದಲನೇ ಮಗ ಮಹದೇವಯ್ಯ ಅಂದರೆ ನನ್ನ ಗಂಡನಾಗಿರುತ್ತಾರೆ. 1 ನೇ ಪ್ರತಿವಾದಿ ಮುದ್ದಮ್ಮರವರ ಎರಡನೇ ಮಗನಾಗಿದ್ದು, 2 ನೇ ಪ್ರತಿವಾದಿ ಅವರ ಮೂರನೇ ಮಗನಾಗಿರುತ್ತಾನೆ. ದಾವಾ ಆಸ್ತಿ ಮೂಲತಃವಾಗಿ ನನ್ನ ಅತ್ತೆಯಾದ ಮುದ್ದಮ್ಮರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ನನ್ನ ಅತ್ತೆಗೆ ಅವರ ಗಂಡನಾದ ಮೂಗಯ್ಯರವರ ಮೂಲಕ ಬಂದಿರುತ್ತದೆ. ನನ್ನ ಗಂಡ ಮುದ್ದಮ್ಮರವರ ಮಗನಾಗಿರುರವುದಿಲ್ಲ ಬದಲಾಗಿ ನಾನು ಎರಡನೇ ಪ್ರತಿವಾದಿಯ ಜೊತೆ ಸೇರಿ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಏನೇನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನನಗೆ ಗೊತ್ತಿರುತ್ತದೆ. ಸಾಕ್ಷಿ ಮುಂದುವರೆದು ಸಾಗುವಳಿ ಪತ್ರ, ಆರ್.ಟಿ.ಸಿ., ಭೋಗ್ಯ ಬಿಡುಗಡೆ ಪತ್ರ, ಇತ್ಯಾದಿಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನನ್ನ ಗಂಡ

ಮಹದೇವಯ್ಯ ಮುದ್ದಮ್ಮರವರ ಮಗ ಎನ್ನುವುದಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ದಾವಾ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯು ಕೊಳ್ಳೇಗೌಡನಹಳ್ಳಿ ಸ.ನಂ. 90 ಆಗಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ಏನು ಎಂಬುದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ನಿ.ಪಿ.-8 ದಾಖಲೆಗು ಹಾಗು ನನಗು ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ನಿ.ಪಿ.-9 ನನ್ನ ಗಂಡನ ಮರಣ ಪ್ರಮಾಣ ಪತ್ರ ಎಂದರೆ ಸರಿ. ಸದರಿ ಮರಣ ಪ್ರಮಾಣ ಪತ್ರದಲ್ಲಿ ನನ್ನ ಗಂಡನ ತಂದೆಯ ಹೆಸರು ನಮೂದು ಮಾಡಿರುವುದಿಲ್ಲ ಆ ಕಾರಣಕ್ಕಾಗಿ ಅದು ನನ್ನ ಗಂಡನ ಮರಣ ಪ್ರಮಾಣ ಪತ್ರ ಅಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡ ನಮ್ಮ ಹೊಸಮಾಳ ಗ್ರಾಮದಲ್ಲಿಲಯೇ ಮೃತಪಟ್ಟಿರುತ್ತಾರೆ. ನನ್ನ ಅತ್ತೆಯಾದ ಮುದ್ದಮ್ಮ ಮೂಲತಃ ಜಕ್ಕಳ್ಳಿ ಗ್ರಾಮದವರಾಗಿರುತ್ತಾರೆ. ಅವರು ನಾಗನಹಳ್ಳಿ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ. ದಾವಾ ಆಸ್ತಿಗು ಮತ್ತು ನನಗು ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ನಿ.ಪಿ.-8 ವಿಲ್ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಮೋಸದಿಂದ ಸೃಷ್ಟಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಮುದ್ದಮ್ಮರವರಿಗೆ ಪ್ರತಿವಾದಿಗಳು ಮಾತ್ರ ಇಬ್ಬರು ಮಕ್ಕಳಿದ್ದು ಅವರ ಆಸ್ತಿಯಾದ ದಾವಾ ಷೆಡ್ಯೂಲ್ ಆಸ್ತಿಯನ್ನು ಅವರ ಇಬ್ಬರು ಮಕ್ಕಳಾದ ಪ್ರತಿವಾದಿಗಳಿಗೆ ವಿಲ್ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೋಸದಿಂದ ಬರೆಸಿಕೊಂಡಿರುತ್ತಾರೆಂದು

ನುಡಿಯುತ್ತಾರೆ. ದಾವಾ ಆಸ್ತಿಯು ಮುದ್ದಮ್ಮರವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅದನ್ನು ಅವರು ಅವರ ಮಕ್ಕಳಾದ ಪ್ರತಿವಾದಿಗಳಿಗೆ ವಿಲ್ ಮೂಲಕ ಬರೆದುಕೊಟ್ಟಿದ್ದು ಸದರಿ ದಾವಾ ಆಸ್ತಿಗು ಹಾಗು ನನಗು ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಗಳ ನಡುವೆ ನಡೆಯುತ್ತಿದ್ದ ಅಸಲು ದಾವೆ ಸಂಖ್ಯೆ: 281/2023 ರ ದಾವೆಯ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ದಾವೆ ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆಂದರೆ ಸರಿ. ಸದರಿ ದಾವೆಗೆ ಹಾಗು 2 ನೇ ಪ್ರತಿವಾದಿಗೆ ಅನುಕೂಲವಾಗಲೀ ಎನ್ನುವ ಕಾರಣಕ್ಕಾಗಿ ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಈಗಲೂ ಸಹ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಜೊತೆ 2 ನೇ ಪ್ರತಿವಾದಿ ಹಾಗು ನಾವು ಸಹ ಅದರ ಸ್ವಾಧೀನದಲ್ಲಿರುತ್ತೇವೆಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನುನ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿಯನ್ನು ಹೇಳಲು ನನಗೆ ಗೊತ್ತಾಗುವುದಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ 03 ಎಕರೆ 10 ಗುಂಟೆ ಇರುತ್ತದೆ.

**ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**